ಇ) ಹಾಗಿದ್ದಲ್ಲಿ, ಈ ಅನಧಿಕೃತವಾಗಿ ವಾಸವಾಗಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು ?

ಈ) ಸದರಿ ನಿವೇಶನಗಳನ್ನು ಸಂಬಂದಪಟ್ಟವರಿಗೆ ರಿಜಿಸ್ಟರ್ ಮಾಡಿಕೊಡಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳಾವುವು ?

ಶ್ರೀ ಮಿರಾಜುದ್ದೀನ್ ಪಟೇಲ್ : (ಪೌರಾಡಳಿತ ರಾಜ್ಯ ಸಚಿವರು):

(ಅ) ಹುಬ್ಬಳ್ಳಿ ಕೃಷ್ಣಾಪುರ ರಿಸ ನಂ. 93ಎ ನೆದ್ದರಲ್ಲಿ ಮಹಾನಗರ ಪಾಲಿಕೆಯಿಂದ 76 ಜನ ನಿವೇಶನರಹಿತರಿಗೆ ಪ್ಲಾಟುಗಳನ್ನು (25-30 ಅಡಿ) ಭೂ ಬಾಡಿಗೆಯಿಂದ ಮ.ನಗರ ಪಾ. ನಂ.1870 ದಿನಾಂಕ 20.12.82 ಹಾಗೂ 3075 ದಿನಾಂಕ 30-5-88ರ ಪ್ರಕಾರ ಪ್ರತಿ ನಿವೇಶನಕ್ಕೆ ವಾರ್ಷಿಕ ಭೂಬಾಡಿಗೆ ರೂ. 100 ರಂತೆ ಖರೀದಿಯಾಗುವವರೆಗೆ ತುಂಬಿಸಿಕೊಳ್ಳುವ ಕರಾರಿಗೊಳಪಟ್ಟು ನಿವೇಶನ ವಿತರಣೆ ಮಾಡಲಾಗಿದೆ.

ಈ ಬಗ್ಗೆ ಸರ್ಕಾರವು ತನ್ನ ಆದೇಶ ಸಂಖ್ಯೆ. ವನಇ149 ಎಹೆಚ್‌ಡಿ 94 ದಿನಾಂಕ 22-3-96ರಲ್ಲಿ ಈ ನಿವೇಶನಗಳಿಗೆ ಪ್ರತಿ ಚ.ಅಡಿಗೆ ರಾ. 53.00ರಂತೆ ಬೆಲೆ ನಿಗದಿಪಡಿಸಿ, ಇದರೊಂದಿಗೆ ಪ್ರತಿ ಶತ 20 ರಂತೆ ಹೆಚ್ಚಿಸಿ ಹಾಗೂ ತುಂಬಿಸಿಕೊಳ್ಳುವ ಕರಾರಿಗೊಳಪಟ್ಟು ಖರೀದಿಗಾಗಿ ನೀಡಲು ಮಂಜೂರು ನೀಡಿದ್ದು ಇದೆ. ಆದರನ್ವಯ ಸಂಬಂಧ ಪಟ್ಟವರಿಗೆ ಖರೀದಿ ಮಾಡಿಸಿಕೊಳ್ಳಲು ತಿಳಿಸಲಾಗಿತ್ತು. ಆದರೆ ಸದರಿಯವರು ಈ ವರೆಗೂ ಯಾರೂ ಹಣ ಸಂದಾಯ ಮಾಡದಿರುವ ಹಿನ್ನಲೆಯಲ್ಲಿ ಸಂಬಂಧಪಟ್ಟವರಿಗೆ ಖರೀದಿ ಪತ್ರ ಮಾಡಿ ಕೊಟ್ಟಿರುವುದಿಲ್ಲ.

ಆ) ಬಂದಿದೆ.

ಇ ಮತ್ತು ಈ) ಮಹಾನಗರ ಪಾಲಿಕೆಯವರು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಕ್ರಮ ಕೈಗೊಂಡಿದೆ. ಆದರೆ ರಿಟ್‌ಅರ್ಜಿ ಸಂಖ್ಯೆ. 41348:98ರಲ್ಲಿ ಉಚ್ಚನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಹಾಗೂ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. ಈ ಪ್ರಕರಣದಲ್ಲಿ ತೀರ್ಪು ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಮಾರ್ಕೆಟ್ ಸ್ಪಾಲ್‌ಗಳು

1084 (1531.)

ಶ್ರೀ ಅಶೋಕ್ ಎಸ್. ಕಾಟವೆ, (ಹುಬ್ಬಳ್ಳಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಇರುವ ಮಾರ್ಕೆಟ್ ಸ್ಪಾಲ್ ಸಂಖ್ಯೆ ಒಟ್ಟು ಎಷ್ಟು?

ಆ) ಇದರಿಂದ ಮಹಾನಗರ ಪಾಲಿಕೆಗೆ ಬರುವ ಆದಾಯ ಎಷ್ಟು?

ಇ) ಈ ಕುರಿತು ನ್ಯಾಯಾಲಯಕ್ಕೆ ಹೋಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ? (ಸಂಪೂರ್ಣವಿವರ ಒದಗಿಸುವುದು).

ಈ) ನ್ಯಾಯಾಲಯಕ್ಕೆ ಹೋದ ಪ್ರಕರಣಗಳ ಬಗ್ಗೆ ಮಹಾನಗರ ಪಾಲಿಕೆ ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.):

ಅ) 2735ಸ್ಪಾಲ್‌ಗಳು.

ಆ) ವರ್ಷಕ್ಕೆ ರೂ 3,82,02,587.00

ಇ) ಜಿಲ್ಲಾನ್ಯಾಯಾಲಯದಲ್ಲಿ 52

ಈ) ಲೋಕ್ ಅದಾಲತ್‌ನಲ್ಲಿ 261

ಒಟ್ಟು ಪ್ರಕರಣಗಳು 313

ಈ) ವಿವಿಧ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳಲ್ಲಿ ಜಿಲ್ಲಾ ನ್ಯಾಯಾಲಯದಿಂದ 52 ಪ್ರಕರಣ ಸ್ಟಾಲೇಜ ಹೆಚ್ಚಳದ ನಿರ್ಧರಣೆಯನ್ನು ಹಣಕಾಸು ಸ್ಥಾಯಿ ಸಮಿತಿ ನಿರ್ಧರಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಉಳಿದ 261 ಪ್ರಕರಣಗಳು ಇನ್ನೂ ಇತ್ಯರ್ಥವಾಗದೇ ಇರುವ ಪ್ರಕರಣಗಳನ್ನು ಲೋಕ್ ಅದಾಲತ್‌ದಲ್ಲಿ ಮಂಡಿಸುವ ಬಗ್ಗೆ ಕ್ರಮ ಜರುಗಿಸಲಾಗಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕಳಪೆ ದರ್ಜೆಯ ಡಾಂಬರೀಕರಣ

1085(1533)

ಶ್ರೀ ಅಶೋಕ್ ಕಾಟ್ಟೆ, (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹದಗೆಟ್ಟ ರಸ್ತೆಗಳ ಡಾಂಬರೀಕರಣಕ್ಕಾಗಿ ಖರ್ಚುಮಾಡಿದ ಹಣವೆಷ್ಟು ? (ರಸ್ತೆಗಳ ಸಂಪೂರ್ಣ ವಿವರ ಒದಗಿಸುವುದು)

2) ಕಳಪೆ ದರ್ಜೆಯ ಡಾಂಬರೀಕರಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.) :

1) ರೂ.2,18,43,210-00

(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

2) ಇಲ್ಲ

3) ಉದ್ಭವಿಸುವುದಿಲ್ಲ